ಶ್ರೀ ಎಸ್. ಕರಿಯಪ್ಪ.—ತಾವೇ ಮೊನ್ನೆತಾನೆ 23,000 ರೂಪಾಯಿಗಳೆಂದು ಹೇಳಿದರಲ್ಲ. ಈಗ 45,000ಕ್ಕೆ ಏರಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಿವೈಸ್ ಆಗಿದೆ.

ಶ್ರೀ ಎಸ್. ಕರಿಯಪ್ಪ —Scrutinyಯಾಗುವುದಕ್ಕೆ ಮುಂಚೆಯೇ revise ಆಯಿತೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—Scrutiny ಯಾಗುವುದಕ್ಕೆ ಮುಂಚೆ ಹೊಸ ವರ್ಷ ಬಂದು, ಈ ವರ್ಷದ ದರಗಳ ಪ್ರಕಾರ ರಿವೈಸ್ ಆಗಿದೆ. The Revised estimate is under scrutiny.

ಶ್ರೀ ಎಸ್. ಕರಿಯಪ್ಪ.—ಈಗ ಒಂದು ತಿಂಗಳ ಹಿಂದೆತಾನೇ ಸುಮಾರು 33,000 ರೂಪಾಯಿಗಳೆಂದು ಹೇಳಿದ್ದೀರಿ. ಈ ಒಂದು ತಿಂಗಳಿನಲ್ಲಿ ಇಷ್ಟು ಬದ ಲಾವಣೆಯಾಯಿತೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—'ಒಂದು ತಿಂಗಳಿ ನಲ್ಲಿ' ಎಂದು ನಾನು ಹೇಳಲಿಲ್ಲ. 'ಇತ್ತೀಚೆಗೆ' ಎಂದು ಮಾತ್ರ ಹೇಳಿದೆ. ರಿವೈಸ್ ಆಗಿರುವುದು ಈ ವರ್ಷ.

ಶ್ರೀ ಎಸ್. ಕರಿಯಪ್ಪ.—Scrutinyಯಾಗಿ ಬಂದ ಕೂಡಲೇ ಮಂಜೂರುಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯೋಚನೆ ಮಾಡುತ್ತೇವೆ.

Representations for the Improvement of Bandur Tank, Channapatna Taluk.

Q.—40 Sri S. KARIAPPA (Virupakshipura).—

Will the Government be pleased to state :—

(*a*) whether they have received representations for the improvement of Bandur tank, Channapatna taluk ;

(*b*) if so, the steps taken in the matter ?

A.—Sri H. K. VEERANNA GOWDH (Minister for Public Works).—

(*a*) Yes.

(*b*) An estimate amounting to Rs. 54,000 for the work has been prepared and is under examination.

ಶ್ರೀ ಎಸ್. ಕರಿಯಪ್ಪ.—ಬಂಡೂರು ಕೆರೆಗೆ ಮರಳು ಬಂದು ಕೆರೆ ಮುಚ್ಚಿಹೋಗುತ್ತಿರುವುದನ್ನು ತಪ್ಪಿಸಬೇಕೆಂದು ಪ್ರಾರ್ಥನೆ ಮಾಡುವುದಕ್ಕೆ ಪ್ರಾರಂಭ ಮಾಡಿ ಸುಮಾರು ಎಷ್ಟು ವರ್ಷಗಳಾಗಿರಬಹುದು ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನಮ್ಮ ರಿಕಾರ್ಡ್ ನಲ್ಲಿ ಕಂಡುಬರುವ ಪ್ರಕಾರ ವಿರೂಪಾಕ್ಷಿಪುರದ ಅಸಿಸ್ಟೆಂಟ್ ಎಂಜಿನಿಯರು ಈ ವಿಚಾರದಲ್ಲಿ ಹೋಗಿ ತನಿಖೆ ಮಾಡಿದಾಗ ಕೆರೆಯ ಅಚ್ಚುಕಟ್ಟುದಾರರು ಯಾರೂ ನೀರು ಸಾಲುವುದಿಲ್ಲವೆಂದು ಸರ್ಕಾರದವರಲ್ಲಿ ಹೇಳಿ ಕೊಳ್ಳಲಿಲ್ಲವೆಂದು ರಿಕಾರ್ಡಿನಲ್ಲಿದೆ.

ಶ್ರೀ ಎಸ್. ಕರಿಯಪ್ಪ.—ನೀರು ಸಾಕಾಗಲಿಲ್ಲ ವೆಂದು ಹೇಳುವ ಮಾತಲ್ಲ. ಆ ಕೆರೆ silt up ಆಗು ತ್ತಿರುವುದನ್ನು ತಪ್ಪಿಸಬೇಕೆಂದು ಎಷ್ಟು ದಿವಸ ದಿಂದ ಕೇಳಲಾಗುತ್ತಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾರೂ ಹಾಗೆ ಹೇಳಲಿಲ್ಲವೆಂದು ಹೇಳಿದ್ದೇನೆ. ಈ ಬಗ್ಗೆ ತನಿಖೆ ನಡೆಸಿದಾಗ ಯಾರೂ ಆ ವಿಷಯ ಹೇಳಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಅಲ್ಲಿಗೊಂದು silt trap ಕೂಡ ಹಾಕಬೇಕೆಂದು ಆಲೋಚನೆ ಮಾಡಿ, ಆ ಬಗ್ಗೆ ಎಸ್ಟಿಮೇಟ್ ಕೂಡ ತಯಾರು ಮಾಡಿ ಎಷ್ಟು ದಿವಸ ವಾಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಸ್ಟಿಮೇಟ್ ತಯಾರು ಮಾಡಿಯೇನೋ ಬಹಳ ದಿವಸವಾಯಿತು. 1954ನೆಯ ಇಸವಿಯಲ್ಲಿ ಷುರುವಾಗಿ 1954-55ರಲ್ಲಿ ಎಸ್ಟಿಮೇಟ್ ಪೂರ್ತಿಯಾಯಿತು.

ಶ್ರೀ ಎಸ್. ಕರಿಯಪ್ಪ.—ಹೀಗೆ silt up ಆಗುವ ವಿಷಯಕ್ಕೆ ನಿಗಾ ಕೊಡದೆ ನಿಧಾನ ಮಾಡುತ್ತಾ ಬಂದರೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ ಕೆರೆಗಳು ಮುಚ್ಚಿಹೋಗಿ ಸರ್ಕಾರಕ್ಕೆ ನಷ್ಟ ವಾಗುವುದಿಲ್ಲವೇ ?

Mr. SPEAKER.—It is a matter of opinion.

ಶ್ರೀ ಎಸ್. ಕರಿಯಪ್ಪ.—ಹೀಗೆ ನಷ್ಟವಾಗುವು ದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಬೇಗ ಕಾರ್ಯ ಕ್ರಮವನ್ನೇಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಉದ್ದೇಶ ಪೂರ್ವಕವಾಗಿ ನಾವೇನನ್ನೂ ನಿಧಾನಮಾಡಿಲ್ಲವೆಂಬು ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಎಸ್ಟಿಮೇಟ್ ಆದಕೂಡಲೆ ಅದನ್ನು ಮತ್ತೆ ಹಿಂದಕ್ಕೆ ಕಳಿಹಿಸಬೇಕಾಯಿತು. ಅದು ನೂಪರಿಂಟೆಂಡಿಂಗ್ ಎಂಜಿನಿಯರ ಆಫೀಸಿನಲ್ಲಿ ತನಿಖೆಯಾಗಿ ಚೀಫ್ ಎಂಜಿನಿ ಯರ್ ಆಫೀಸಿಗೆ ಈಗ ಬಂದಿದೆ. ಈಗ ತನಿಖೆ ಮಾಡಿ ದಲ್ಲಿ ಅಚ್ಚುಕಟ್ಟುದಾರರು ಈ ವಿಚಾರದಲ್ಲಿ ಕಂಪ್ಲೇಂಟ್ ಏನೂ ಮಾಡಿಲ್ಲವೆಂದು ವ್ಯಕ್ತಪಟ್ಟಿದೆ. ಮತ್ತು ಎಡಗಡೆ ಕೋಡಿ ಎತ್ತರಿಸಿದರೆ ಬಂಡೂರು ಕೆರೆಯ ಕೆಳಗಿನ ಜಮೀನು ಮುಳುಗಡೆಯಾಗುತ್ತದೆಂದು ಗೊತ್ತಾಗಿದೆ. ಆದ್ದರಿಂದ ಜನರು ಕೇಳಲಿ ಅಥವಾ ಕೇಳದಿರಲಿ ಈ ಕೆಲಸದ ಅಗತ್ಯವೆಷ್ಟಿದೆಯೆಂಬುದನ್ನು ಪರಿಶೀಲನೆಮಾಡಿ ನೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಈ ಕೆರೆ silt up ಆಗು ವುದನ್ನು ತಪ್ಪಿಸಬೇಕೆಂದು ಅಚ್ಚುಕಟ್ಟುದಾರರು ಕೇಳಿ ಕೊಳ್ಳಬೇಕೇ ? ಹಾಗಿಲ್ಲದೆ ಯಾವುದಾದರೂ conferenceನಲ್ಲಿ ಹೇಳಿದರೆ ಸಾಲದೇ ?

Sri JAKAKU SHAMSUDDIN HUSAIN SAIB.—On a point of information. Should not a supplementary relate to the answers given to the questions put ?

Mr. SPEAKER.—It is so ; there is no doubt about it. Here we are a little liberal in allowing supplementaries. I want to be strict, but that will be done in stages.